1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.181/2017

ದಿಃ 29.03.2019

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-10 Pw-1

| | | |
|---|---|---|
| ಹೆಸರು | ಃ | ಎಂ ಚಂದ್ರಶೇಖರಯ್ಯ |
| ತಂದೆಯ/ಗಂಡನ ಹೆಸರು | ಃ | ಮುನಿಯಪ್ಪ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ಹಿರಿಯ ಪುರುಷ ಆರೋಗ್ಯ ಸಹಾಯಕ, ಪಿ ಎಚ್ ಸಿ, ತಾವರೆಕೆರೆ |
| ವಾಸಸ್ಥಳ | ಃ | ತಾವರೆಕೆರೆ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿದಾರರು 3 ಮಹಜರ್ಗಳನ್ನು ಮತ್ತು ಅದರಲ್ಲಿರುವ ತಮ್ಮ ಸಹಿಗಳನ್ನು ಗುರುತಿಸಿದ್ದು, ಅವುಗಳನ್ನು ನಿ.ಪಿ.1 ರಿಂದ 3, 1(ಎ) ಇಂದ 3(ಎ) ಎಂದು ಗುರುತಿಸಲಾಯಿತು. ಈ ಸಹಿಗಳನ್ನು ದಿಃ 02.09.2017 ರಂದು ಪೊಲೀಸ್ ಠಾಣೆ ಪಕ್ಕದಲ್ಲಿರುವ ಸಂತೆ ಬೀದಿಗೆ ಕರೆದುಕೊಂಡು ಹೋಗಿ ಸಿದ್ದರಾಜು ಎನ್ನುವವರು ಟಾಟಾ ಎ.ಸಿ ವಾಹನವನ್ನು ತೋರಿಸಿದರು ಅದನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡು ಸ್ಥಳದಲ್ಲಿಯೇ ನಿಪಿ 1 ಮಹಜರ್ಗೆ ಸಹಿ ಪಡೆದರು . ಆ

ದಿನ ವಾಹನ ತೋರಿಸಿದ್ದ ಸಿದ್ದರಾಜು ನ್ಯಾಯಾಲಯದ ಮುಂದೆ ಇದ್ದಾರೆ ಎಂದು ಗುರುತಿಸಿದರು. ಆ ವಾಹನವನ್ನು ಪೊಲೀಸ್ ಠಾಣೆ ಆವರಣಕ್ಕೆ ತೆಗೆದುಕೊಂಡು ಬಂದರು, ಆ ವಾಹನದ 4 ಫೋಟೋಗಳನ್ನು ಸಾಕ್ಷಿದಾರರು ಗುರುತಿಸಿದ್ದು ಅವುಗಳನ್ನು ನಿಪಿ 4 ರಿಂದ 7 ಎಂದು ಗುರುತಿಸಲಾಯಿತು.

ದಿಃ04.09.2017 ರಂದು 1 ನೇ ಆರೋಪಿ ಸಿದ್ದರಾಜು ನಮ್ಮನ್ನು ಮತ್ತು ಪೊಲೀಸರನ್ನು ತಿಪ್ಪಗೊಂಡನಹಳ್ಳಿ ಮತ್ತು ಗಂಗಪ್ಪನ ಹಳ್ಳಿ ನಡುವೆ ಇರುವ ಗುಡ್ಡೆಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ, 1 ನೇ ಆರೋಪಿ ಮುಂದೆ ಮುಂದೆ ಹೋಗಿ ಬೇಳಿಯಲ್ಲಿದ್ದ ಒಂದು 50 ಕೆಜಿ ಬಾರ ಇರುವಂತ ಕಲ್ಲನ್ನು ತೋರಿಸಿ, ಕೃತ್ಯಕ್ಕೆ  ಉಪಯೋಗಿಸಿದ ಕಲ್ಲನ್ನು ಕಲ್ಲು ಎಂದು ಹಾಜರುಪಡಿಸಿದ ಅದನ್ನು ಪೊಲೀಸರು ನಿಪಿ 2 ಮಹಜರ್ ಮಾಡಿ ಅಮಾನತ್ತು ಪಡಿಸಿಕೊಂಡರು, ಎಂದು ಈಗ ಮೊಹರು ಮಾಡಿದ ಬಟ್ಟೆ ಚೀಲವನ್ನುತೆರೆದು ತೋರಿಸಿದಾಗ ಕಲ್ಲನ್ನು ಗುರುತಿಸಿದ್ದು ಅದನ್ನು ಮು. ಮಾ ನಂಃ 1 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಮ್ಮ ಜೊತೆಗೆ ರೋಹಿತ್ ಎನ್ನುವವರು ಇದ್ದರು. ಜೀಪ್ ನಲ್ಲಿ ಮಾಚೋಹಳ್ಳಿಗೆ 1 ನೇ ಆರೋಪಿ ಸಿದ್ದರಾಜು ಕರೆದುಕೊಂಡು ಹೋಗಿ ಮಾಚೋಹಳ್ಳಿಯಲ್ಲಿ ಇದ್ದ ಒಂದು ಸೀಟಿನ ಮನೆಯಲ್ಲಿದ್ದ  ಮಾರುತಿ

ಸುಜುಕಿ ಕಾರನ್ನು ತೋರಿಸಿದರು ಪೊಲೀಸರು ಇದು ಕೃತ್ಯಕ್ಕೆ ಉಪಯೋಗಿಸಿದ್ದು ಎಂದು ನಿಪಿ 3 ಮಹಜರ್ ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಂಡರು. ಸಾಕ್ಷಿದಾರರು ಸದರಿ ಕಾರಿನ 4 ಪೋಟೋಗಳನ್ನು ಗುರುತಿಸಿದ್ದು ನಿಪಿ 8 ರಿಂದ 11 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಬಿ.ಎಚ್.ಸಿ.ಕೆ. ವಕೀಲರಿಂದ 1ನೇ ಆರೋಪಿ ಪರವಾಗಿಃ</u>

ನಾನು ನನ್ನ ಕರ್ತವ್ಯಕ್ಕೆ ಬೆಳಿಗ್ಗೆ 9 ಗಂಟೆಗೆ ಹೋಗಿ ಸಂಜೆ 4.30 ಗಂಟೆ ವಾಪಸ್ಸು ಆಗುತ್ತೇನೆ. ಪೊಲೀಸರು ನಮ್ಮ ವೈದ್ಯಾಧಿಕಾರಿ ನೋಟಿಸ್ ನೀಡಿ ನನ್ನನ್ನು ಪಂಚನಾಗಿ ಕಳುಹಿಸುವಂತೆ ಕೋರಿದ್ದರು.ಆ ನೋಟಿಸ್‌ಗೆ ನಾನು ಸಹಿ ಮಾಡಿದ್ದೇನೆ. ಟಾಟಾ ಎ.ಸಿ ವಾಹನ ನೊಂದಣಿ ಸಂಖ್ಯೆ ಈಗ ನೆನಪಿಲ್ಲ. ಆ ವಾಹನವನ್ನು ಬೆಳಿಗ್ಗೆ 9:45 ರಿಂದ 10:30 ಒಳಗೆ ಅಮಾನತ್ತು ಪಡಿಸಿಕೊಂಡರು. ಆ ವಾಹನವನ್ನು ಸಿದ್ದರಾಜು ತಂದಿದ್ದಾರೆ ಎಂದು ಹೇಳಿದರು. ನಿಪಿ 2 ಮಹಜರ್ ನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎನ್ನುವುದು ಸರಿಯಲ್ಲ, ಆ ದಿನ ಓದಿ ಸಹಿ ಮಾಡಿದೆ. ಆರೋಪಿ ಆ ವಾಹನವನ್ನು ತಂದು ಹಾಜರು

ಪಡಿಸಿದರು ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಹಾಗೂ ಆ ಮಹಜರ್ಗಳಿಗೆ ಕರ್ತವ್ಯ ಸ್ಥಳಕ್ಕೆ ಬಂದು ಸಹಿ ಪಡೆದಿದ್ದಾರೆ ಅಂದರೆ ಸರಿಯಲ್ಲ. 1ನೇ ಆರೋಪಿ ಸಿದ್ದರಾಜು ಗುಡ್ಡೆ ಪ್ರದೇಶಕ್ಕೆ ಕರೆದುಕೊಂಡು ಹೋಗಿದ್ದ ಅಲ್ಲಿ ಕೃತ್ಯಕ್ಕೆ ಉಪಯೋಗಿಸಿದ ಕಲ್ಲು ಎಂದು ಹಾಜರುಪಡಿಸಿದ ಅದನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡರು ಎಂದು ಸುಳ್ಳು ಹೇತ್ತಿದ್ದೇನೆ ಅಂದರೆ ಸರಿಯಲ್ಲ. ಮು.ಮಾ 1 ಸ್ವರೂಪದ ಕಲ್ಲು ಕಾಡಿನಲ್ಲಿ ದೊರೆಯುತ್ತದೆ ಎಂದರೆ ಸರಿಯಲ್ಲ, ಆ ಕಲ್ಲನ್ನು ಗುರುತಿಸಲು ನಾನು ಯಾವುದೇ ವಿಶೇಷ ಗುರುತು ಇಟ್ಟುಕೊಂಡಿಲ್ಲ. 1ನೇ ಆರೋಪಿ ಮು.ಮಾ ಕೃತ್ಯಕ್ಕೆ ಉಪಯೋಗಿಸಿದ ಕಲ್ಲು ಎಂದು ಹೇಳಿದೆ ಇದ್ದಾಗ್ಯೂ ಸಹ ಹೇಳಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಮಾರುತಿ ಕಾರನ್ನು ಕಾರು ಠಾಣೆಯ ಆವರಣದಲ್ಲಿಯೇ ಇತ್ತು ನಾನು ಮಹಜರ್ಗೆ ಠಾಣೆಯಲ್ಲಿಯೇ ಸಹಿ ಮಾಡಿದ್ದಾಗೂ್ ಸಿದ್ದರಾಜು ನಮ್ಮನ್ನು ಮತ್ತು ಪೊಲೀಸರನ್ನು ಕರೆದುಕೊಂಡುಹೋಗಿ ತೊರಿಸಿದ, ಅದನ್ನು ಅಮಾನತ್ತು ಪಡಿಸಿಕೊಂಡರು ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ ಕೆ ಎನ್ ಕೆ ವಕೀಲರಿಂದ 2 ನೇ ಆರೋಪಿ ಪರವಾಗಿ ಹಾಗೂ 3 ನೇ ಆರೋಪಿ ಪರವಾಗಿ ಶ್ರೀ ಡಿ ಎನ್ ಎಚ್ ವಕೀಲರಿಂದ್ಲಃ ಕೆಎನ್‌ಕೆ ಮತ್ತು ಡಿ ಎನ್ ಎಚ್ ವಕೀಲರು ಗೈರು ಹಾಜರಿ ಆದ್ದರಿಂದ ಅವರಿಂದ ಪಾಟೀ ಸವಾಲು ಇಲ್ಲ ಎಂದು ಆದೇಶಿಸಿದೆ.</u>

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಉಮೇಶ್ ಮೂಲಿಮನಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.